# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಟಿ.ಬಸವರಾಜ ತಂದೆ ಲೇಟ್ ಶಿವನಗೌಡ,<br>2)ಟಿ.ಶಿವಾನಂದಪ್ಪ ತಂದೆ ಶಿವನಗೌಡ<br>3)ವಿಶಾಲಾಕ್ಷಿ ಗಂಡ ತೋಟನಗೌಡ,<br>4)ಭಾಗ್ಯಲಕ್ಷ್ಮೀ ಗಂಡ ಮಲ್ಲಿಕಾರ್ಜುನ ಕೆ.,<br>ಸಬ್‌ಜೈಲ್ ಎದುರುಗಡೆ, ಹೂವಿನಹಡಗಲಿ | ಶಾಂತನಗೌಡ ತಂದೆ ಶಿವನಗೌಡ,<br>ಹುಗಲೂರು ಗ್ರಾಮ, ಹಡಗಲಿ ತಾ. |

<u>ವಿವಾದಿತ ಜಮೀನಿನ ವಿವರ:</u>

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಹುಗಲೂರು | 259/ಬಿ | 7-40 | ಖುಷ್ಕಿ |
| 2. | ,, | 260 | 6-86 | ,, |

<u>ಪೀಠಿಕೆ:-</u>

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಹುಗಲೂರು ಗ್ರಾಮದ ಸ.ನಂ.259/ಬಿ ವಿ:7-49, 260 ವಿ:6-86 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಹೂವಿನಹಡಗಲಿ ಪಟ್ಟಣ ನಿವಾಸಿಯಾದ ಟಿ.ಬಸವರಾಜ ತಂದೆ ಲೇಟ್ ಶಿವನಗೌಡ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿ:18-09-2015 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ 22-09-2015 ರಂದು ಜಾರಿ ಮಾಡಲಾಗಿ, ನಿಗದಿತ ಅವದಿಯೊಳಗೆ ಅಂದರೆ ದಿ:08-10-2015 ರಂದು ಹುಗಲೂರು ಗ್ರಾಮದ ನಿವಾಸಿಯಾದ ಶಾಂತನಗೌಡ ತಂದೆ ಶಿವನಗೌಡ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು ಸದರಿ M.NO.18/2015-16 ರ ಕಡತವನ್ನು ವಿವಾದಿತ ಪ್ರಕರಣ ಎಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ವಿಚಾರಣೆಗೆ ದಿನಾಂಕ 20-01-2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ತನ್ನ ತಂದೆಯ ತಂದೆ ಬಸಲಿಂಗನಗೌಡ ರವರು 0-66 ಸೆಂಟ್ಸ್ ಜಮೀನನ್ನು 1960 ರಲ್ಲಿಯೇ ಖರೀದಿಸಿದ್ದು, ರಿಜಿಸ್ಟರ್ ಆಗಿರುತ್ತದೆ ಎಂದು ಮೌಖಿಕವಾಗಿ ತಿಳಿಸಿದರು. ತದನಂತರ ಉಭಯರು ಹಾಜರಾಗಿ ತಾವು ಪರಸ್ಪರ ಒಪ್ಪಿ ರಾಜಿಯಾಗಿರುವ ಬಗ್ಗೆ ಲಿಖಿತ ರಾಜಿಪತ್ರ ಸಲ್ಲಿಸಿರುತ್ತಾರೆ. ಅರ್ಜಿದಾರರು ತಕರಾರುದಾರರಿಗೆ 0-66 ಸೆಂಟ್ಸ್ ಜಮೀನನ್ನು ಬಿಟ್ಟುಕೊಡಲು ಒಪ್ಪಿರುತ್ತಾರೆ. ರಾಜಿಪತ್ರದಲ್ಲಿ ಸ.ನಂ.260 ವಿ:6-86 ಎಕರೆಯಿದ್ದು, ಅದರಲ್ಲಿ 0-66 ಸೆಂಟ್ಸ್ ಮಾತ್ರಸಿವನಗೌಡ ತಂದೆ ದಿ//ಬಸಲಿಂಗನಗೌಡ(ಮರೇಗೌಡ ಇವರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ವಂಶಸ್ಥರಾದ ಶಾಂತನಗೌಡ ತಂದೆ ಲೇ.ಸಿವನಗೌಡ ಇವರಿಗೆ ಹಕ್ಕು ಬಿಡುಗಡೆ ಮೂಲಕ ಬಿಟ್ಟುಕೊಡಲು ಒಪ್ಪಿ ರಾಜಿಯಾಗಿರುತ್ತೇವೆ ಎಂದು ಇರುತ್ತದೆ. ಉಭಯರು ಸಲ್ಲಿಸಿದ ಲಿಖೀತ ಒಪ್ಪಿಗೆ ಪ್ರಮಾಣ ಪತ್ರದಲ್ಲಿಯೂ ಇದೇ ವಿಷಯವಿರುತ್ತದೆ. ಅರ್ಜಿದಾರರು ತಕರಾರುದಾರರಿಗೆ ಸ.ನಂ.260 ಪೈಕಿ 0-66 ಎಕರೆ ಜಮೀನನ್ನು ತಕರಾರುದಾರರಿಗೆ ಬಿಟ್ಟುಕೊಡಲು ಒಪ್ಪಿರುವುದರಿಂದ, ಉಭಯರ ಕೊರಿಕೆಯಂತೆ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/09/2015-16 ದಿನಾಂಕ:06-04-2016

<u>ಆದೇಶ</u>

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.18/2015-16 ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸುತ್ತಾ, ಪೋತಿ ವಾರಸಾ ಪ್ರಕಾರ ಅರ್ಜಿದಾರರ ಹೆಸರಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಇಟ್ಟಿಗಿ
ಹಡಗಲಿ ತಾ॥ ಬಳ್ಳಾರಿ ಜಿಲ್ಲೆ

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.